ಅ) ಶಿವಮೊಗ್ಗ ತಾಲ್ಲೂಕಿನ ತಹಸೀಲ್ದಾರ್ ರವರ ಕಛೇರಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡುವ ಕ್ರಮ ಯಾವ ಹಂತದಲ್ಲಿದೆ (ವಿವರ ನೀಡುವುದು)?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೊಸದಾಗಿ ಸೃಜಿಸಲಾಗಿರುವ ಏಳು ಹೊಸ ಜಿಲ್ಲೆಗಳಲ್ಲಿ ಜಿಲ್ಲಾ ಕಛೇರಿಗಳ ಸಂಕೀರ್ಣ ನಿರ್ಮಾಣಕ್ಕಾಗಿ ಕರ್ನಾಟಕ ಗೃಹ ಮಂಡಳಿಯನ್ನು ನಿರ್ಮಾಣದ ಎಜೆನ್ಸಿಯೆಂದು ಗುರುತಿಸಲಾಗಿದೆ. ಇದಕ್ಕಾಗಿ ಹುಡ್ಕೊ ಸಂಸ್ಥೆಯಿಂದ 100.00 ಕೋಟಿ ರೂ. ಗಳ ಸಾಲ ಪಡೆಯಲಾಗಿದೆ. ಈಗ ರಾಜ್ಯದಲ್ಲಿ ಮಿನಿ ವಿಧಾನ ಸೌಧಗಳು ಇಲ್ಲದ 88 ತಾಲ್ಲೂಕುಗಳಲ್ಲಿ ಮಿನಿ ವಿಧಾನ ಸೌಧ ನಿರ್ಮಿಸಲು ಹುಡ್ಕೊ ಸಂಸ್ಥೆಯಿಂದ ಸಾಲ ಪಡೆಯಲು ಕಂದಾಯ ಇಲಾಖೆಯನ್ನು ಅನುಮತಿಸಲು ಸರ್ಕಾರವನ್ನು ಕೋರಲು ಯೋಜಿಸಲಾಗಿದೆ. ಶಿವಮೊಗ್ಗೆಯು ಈ 88 ತಾಲ್ಲೂಕುಗಳಲ್ಲಿ ಸೇರಿರುತ್ತದೆ.

ಶಿವಮೊಗ್ಗ ನಗರದ ನೆಹರು ಕ್ರೀಡಾಂಗಣದಲ್ಲಿ ಸಿಂಡರ್ ಟ್ರಾಕ್ ನಿರ್ಮಾಣ

194(303) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ.(ಶಿವಮೊಗ್ಗ) ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ನಗರದ ನೆಹರು ಕ್ರೀಡಾಂಗಣದಲ್ಲಿ ನಿರ್ಮಾಣ ಮಾಡುತ್ತಿರುವ ಸಿಂಡರ್ ಟ್ರಾಕ್ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್ (ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):

ಅ) ಈ ಕಾಮಗಾರಿಯು 4 ಪದರಗಳಲ್ಲಿ ನಿರ್ಮಾಣ ಮಾಡಬೇಕಾಗಿದ್ದು ಅದರಂತೆ 4 ಪದರಗಳು ಮುಕ್ತಾಯಗೊಂಡಿರುತ್ತದೆ. ಈಗ ಟ್ರಾಕ್ ಕರ್ವ್ ರೆಕ್ಟಿಫಿಕೇಷನ್ ಕಾಮಗಾರಿ ಮಾತ್ರ ಬಾಕಿ ಉಳಿದಿದೆ.

ಆ) ಈ ಕಾಮಗಾರಿಯನ್ನು ಸದ್ಯದಲ್ಲೇ ಪೂರ್ಣಗೊಳಿಸಲಾಗುವುದು.

ರಾಜ್ಯದಲ್ಲಿ ಯೋಜನೆ ಯೋಜನೇತರ ಕಾಮಗಾರಿಗಳು

195(604) ಶ್ರೀ ಚನ್ನಿಗಪ್ಪ ಸಿ (ಕೊರಟಗೆರೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ 1999-2000ನೇ ಸಾಲಿನಿಂದ ಈವರೆಗೆ ಯೋಜನೆ ಮತ್ತು ಯೋಜನೇತರ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳ ವಿವರ ನೀಡುವುದು? ಇವುಗಳ ಮೊತ್ತ ಎಷ್ಟು? ಖರ್ಚಾದ ಮೊತ್ತ ಎಷ್ಟು ಉಳಿಕೆ ಹಣ ಎಷ್ಟು?

ಆ) ಕಾಮಗಾರಿ ನಡೆದಿರುವ ಕೆಲಸಗಳಿಗೆ ಸರ್ಕಾರ ಹಣ ಕೊಟ್ಟಿದೆಯೆ, ಇಲ್ಲವೇ;? ಸಂಪೂರ್ಣ ಮಾಹಿತಿ ನೀಡುವುದು?